# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 119 | Pages. 2 | Date: 11-03-2025, TUESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 119 - ಪುಟಗಳು : 2 - 11 ಮಾರ್ಚ್ 2025 ಮಂಗಳವಾರ | Ph: 8762954248 | ದರ : ₹1


# ಹಾಸನಾಂಬ ಜಾತ್ರೆ: ಕ್ರಿಯಾ ಯೋಜನೆ ರೂಪಿಸಲು ಜಿಲ್ಲಾಧಿಕಾರಿ ನಿರ್ದೇಶನ

## ದೇಗುಲ ಸುತ್ತಲಿನ ಜಾಗ ಸ್ವಾಧೀನಕ್ಕೆ ಕ್ರಮ ವಹಿಸಿ ಎಂದ ಸತ್ಯಭಾಮ



ಹಾಸನ: ನಗರದ ಅಧಿದೇವತೆ ಹಾಸನಾಂಬ ದೇವಿ ಕೀರ್ತಿ ಪ್ರಪಂಚದಾದ್ಯಂತ ಪಸರಿಸಿದ್ದು, 2025ರಲ್ಲಿ ಜಾತ್ರಾ ಮಹೋತ್ಸವವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡುವ ನಿಟ್ಟಿನಲ್ಲಿ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಹಾಸನಾಂಬ ಮಹೋತ್ಸವ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೇವಿ ದರ್ಶನಕ್ಕೆ ಆಗಮಿಸುವ ಭಕ್ತಾದಿಗಳಿಗೆ ಸೂಕ್ತ ಮೂಸೌಕರ್ಯ ಒದಗಿಸುವುದು ಅಗತ್ಯವಿದೆ. ಜಾತ್ರಾ ಮಹೋತವವನ್ನು ಯಶಸ್ವಿಯಾಗಿಸಲು ಈಗಿನಿಂದಲೇ ತಯಾರಿ ಅಗತ್ಯವಿದೆ ಎಂದು ತಿಳಿಸಿದರು.

ದೇವಾಲಯದ ಎಡಭಾಗದಲ್ಲಿರುವ ಹಳೇಯ



ಮನೆಗಳನ್ನು ನೇರ ಖರೀದಿಗೆ ಒಪ್ಪಿಕೊಡುವುದಾದರೆ ಕ್ರಮವಹಿಸುವಂತೆ ದೇವಾಲಯದ ಆಡಳಿತಾಧಿಕಾರಿಗೆ ಸೂಚಿಸಿದರಲ್ಲದೆ, ಅಗತ್ಯವಿದ್ದರೆ ಭೂಸ್ವಾಧೀನಕ್ಕೆ ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

ಈ ಬಾರಿ ಪ್ರಸಾದ ವಿತರಣೆಗೆ ವ್ಯವಸ್ಥೆ ಮಾಡಲಾಗಿದ್ದ ಜಾಗವನ್ನು ಸಹ ಖರೀದಿಗೆ ಕ್ರಮವಹಿಸುವಂತೆ ತಿಳಿಸಿದರು.

ದೇವಾಲಯದ ದುರಸ್ತಿ, ದೇವಾಲಯಕ್ಕೆ ಬಣ್ಣ, ಬ್ಯಾರಿಕೇಡ್ ಪ್ರತಿಯೊಂದನ್ನು ಜವಾಬ್ದಾರಿಯಿಂದ ನಿರ್ವಹಿಸಲು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

1000, 500 ರೂ. ಟಿಕೆಟ್ ಹಾಗೂ ಧರ್ಮ ದರ್ಶನಕ್ಕೆ ಪ್ರತ್ಯೇಕ ಸರದಿ ಸಾಲಿನಲ್ಲಿ ಭಕ್ತಾದಿಗಳು ಸಾಗಲು 2 ಕಿ.ಮೀ ವರೆಗೆ ಬ್ಯಾರಿಕೇಡ್ ವ್ಯವಸ್ಥೆ ಮಾಡಬೇಕು. ದೇವಾಲಯದ ಆವರಣ ಹಾಗೂ ಹೊರ ಆವರಣದ ಸ್ವಚ್ಛತೆ ಹಾಗೂ ತಾತ್ಕಾಲಿಕ ಶೌಚಾಲಯ ವ್ಯವಸ್ಥೆಯನ್ನು ಒಂದು ಉತ್ತಮ ಏಜೆನ್ಸಿಗೆ ಹೊರಗುತ್ತಿಗೆ ನೀಡಿ ನಿರ್ವಹಿಸಬೇಕು.

ಹೆಲಿ ಟೂರಿಸಂ, ಹೂವಿನ ಅಲಂಕಾರ, ಫಲಪುಷ್ಪ ಪ್ರದರ್ಶನ, ಲೈಟಿಂಗ್ ವ್ಯವಸ್ಥೆಗೆ ಕ್ರಮ ಕೈಗೊಳ್ಳಬೇಕು. ಕಳೆದ ವರ್ಷ ಇಸ್ಕಾನ್ ದೇವಾಲಯದವರು ದೊನ್ನೆ ಪ್ರಸಾದ ಹಾಗೂ ಲಡ್ಡು ಪ್ರಸಾದವನ್ನು ಗುಣಮಟ್ಟದಲ್ಲಿ ನೀಡಿದ್ದಾರೆ. ಅವರ ಸೇವೆ ಬಹಳ ಅಚ್ಚುಕಟ್ಟು ಹಾಗೂ ಉತ್ತಮವಾಗಿತ್ತು. ಈ ಬಾರಿಯೂ ಪ್ರಸಾದ ವಿತರಣೆಗೆ ಇಸ್ಕಾನ್‌ಗೆ ನೀಡಬಹುದಾಗಿದೆ ಎಂದರು.

ಉಪ ವಿಭಾಗಾಧಿಕಾರಿ ಹಾಗೂ ದೇವಾಲಯದ ಆಡಳಿತಾಧಿಕಾರಿ ಮಾರುತಿ, ಭೂದಾಖಲೆಗಳ ಇಲಾಖೆ ಉಪ ನಿರ್ದೇಶಕ ಸುಜಯ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೃಷ್ಣಮೂರ್ತಿ ಹಾಗೂ ಇತರರಿದ್ದರು.

## ಬಾಲ ಕಾರ್ಮಿಕರ ಪತ್ತೆಗೆ ಸಹಕರಿಸಿ

ಹಾಸನ: ಜಿಲ್ಲೆಯಲ್ಲಿ ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಒಂದು ತಂಡವಾಗಿ ಸಮನ್ವಯತೆಯಿಂದ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪತ್ತೆ ಹಚ್ಚಿ ಅಗತ್ಯ ಕ್ರಮ ಕೈಗೊಳ್ಳಬೇಕು. ಬಾಲಕಾರ್ಮಿಕರಾಗಿ ಪತ್ತೆಯಾದ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿದಾಗ ಮಗುವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಗಮನಕ್ಕೆ ತರಬೇಕು. ಮಗುವಿನ ಮುಂದಿನ ವಿದ್ಯಾಭ್ಯಾಸದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಳ್ಳಬೇಕು ಎಂದರು.

ಎಲ್ಲಾ ಇಲಾಖೆಗಳ ಸಹಭಾಗಿತ್ವದಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಕೆಲಸ ಮಾಡಬೇಕು. ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವ 'ಾಲೀಕರ ವಿರುದ್ಧ ಪ್ರಕರಣ ದಾಖಲಿಸುವಾಗ ಪೊಲೀಸ್ ಇಲಾಖೆ ನಿರ್ಲಕ್ಷ್ಯವಹಿಸದೆ ಸಂಬಂಧಪಟ್ಟ ಇಲಾಖೆಯು ಕ್ರಮ ಕೈಗೊಳ್ಳಲು ಸಹಕರಿಸಬೇಕು ಎಂದು ತಿಳಿಸಿದರು.

ಬಾಲಕಾರ್ಮಿಕ ಹಾಗೂ ಕಿಶೋರಾವಸ್ಥೆ ಕಾರ್ಮಿಕರು ಪತ್ತೆಯಾದಾಗ ಮಕ್ಕಳ ವಯಸ್ಸಿನ ದೃಢೀಕರಣ ಪತ್ರ ಮಾಡಿಕೊಡಲು ಜಿಲ್ಲಾ ವೈದ್ಯಾಧಿಕಾರಿ ಹಾಗೂ ತಾಲ್ಲೂಕು ವೈದ್ಯಾಧಿಕಾರಿಗಳು ಕ್ರಮವಹಿಸುವಂತೆ ಸೂಚಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಕೃಷ್ಣಮೂರ್ತಿ ಇತರರಿದ್ದರು.

# ಬಜೆಟ್‌ನಲ್ಲಿ ಜಿಲ್ಲೆಗೆ ಶೂನ್ಯ ಕೊಡುಗೆ: ರೇವಣ್ಣ



ಹಾಸನ: ಈ ಬಾರಿಯ ಬಜೆಟ್‌ನಲ್ಲಿ ಜಿಲ್ಲೆಗೆ ಯಾವುದೇ ಯೋಜನೆ ಕೊಟ್ಟಿಲ್ಲ, ಬಾಕಿ ಯೋಜನೆ ಗಳಿಗೂ ಹಣ ನಿಗದಿ ಮಾಡಿಲ್ಲ. ಬದಲಾಗಿ ನಮ್ಮ ಜಿಲ್ಲೆಗೆ ಪಂಚ ಗ್ಯಾರಂಟಿ ಜೊತೆಗೆ ಹೆಚ್ಚುವರಿಯಾಗಿ ಜೂಜು, ಎಣ್ಣೆ, ಮಟ್ಕಾ, ಗಾಂಜಾ ಗ್ಯಾರಂಟಿ ಕೊಟ್ಟಿದ್ದಾರೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ವ್ಯಂಗ್ಯವಾಡಿದರು.

ಸೋಮವಾರ ಸುದ್ದಿಗೋಷ್ಟಿಯಲ್ಲಿ ಮಾತನಾ ಡಿದ ಅವರು, ರಾಜ್ಯದ ಮುಖ್ಯಮಂತ್ರಿ ಗಳು 2025-2026 ಸಾಲಿನ ಬಜೆಟ್ ಮಂಡನೆ ಮಾಡಿದ್ದಾರೆ.

ರಾಜ್ಯದಲ್ಲಿ ಐದು ಗ್ಯಾರಂಟಿಗಳನ್ನು ಮುಂದುವರೆಸಿದ್ದಾರೆ. ಆದರೆ ಬಜೆಟ್‌ನಲ್ಲಿ ಹಾಸನ ಜಿಲ್ಲೆಯೇ ಇಲ್ಲ ಎಂದು ವಿಷಾದಿಸಿದರು.

ಈ ಸರ್ಕಾರಕ್ಕೆ ಜಿಲ್ಲೆಯ ಜನ ಧನ್ಯವಾದ ಹೇಳಬೇಕು ಎಂದು ಲೇವಡಿ ಮಾಡಿದ ರೇವಣ್ಣ, ಅನೇಕ ಕಡೆಗಳಲ್ಲಿ ಎಣ್ಣೆ ಅಂಗಡಿ ಹೆಚ್ಚಾಗಿ ಗೌರವಸ್ಥ ಕುಟುಂಬ ಬದಕಲು ಆಗುತ್ತಿಲ್ಲ, ಜೂಜು-ಮಟ್ಕಾ ದಂಧೆಯೂ ಹೆಚ್ಚಾಗಿದೆ ಎಂದು ಬೇಸರ ಹೊರ ಹಾಕಿದರು.

ತೋಟಗಾರಿಕೆ ಕಾಲೇಜು ಮಂಜೂರು ಮಾಡ್ತಾರೆ ಎನ್ನುವ ನಿರೀಕ್ಷೆ ಇತ್ತು, ಫ್ಲೈಓವರ್‌ಗೆ ದುಡ್ಡು ಕೊಡ್ತಾರೆ ಎಂದು ಭಾವಿಸಿದ್ದೆವು, ಕುಮಾರಸ್ವಾಮಿ ಸಿಎಂ ಆದಾಗ ತಂದ ಯೋಜನೆಗಳಿಗೆ ಮುಂದುವರಿದ ಹಣ ಬಿಡುಗಡೆ ಮಾಡಬೇಕಿತ್ತು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನೂರು ಕೋಟಿ ಕೊಡಬೇಕಿತ್ತು, ಅದನ್ನೂ ಕೊಟ್ಟಿಲ್ಲ ಎಂದು ಕಿಡಿಕಾರಿದರು.

ಒಟ್ಟಿನಲ್ಲಿ ಜಿಲ್ಲೆಗೆ ಬಜೆಟ್ ನಲ್ಲಿ ಯಾವುದೇ ಯೋಜನೆ ನೀಡಿಲ್ಲ, ಹಾಸನ ಕರ್ನಾಟಕದ ಬಜೆಟ್ ಬುಕ್‌ನಲ್ಲಿ ಇಲ್ಲ, ದೆಹಲಿ ಬಜೆಟ್ ಬುಕ್‌ನಲ್ಲಿ ಇದೆ. ಕೇಂದ್ರದಿಂದ ಜಿಲ್ಲೆಗೆ ಯಾವ ಯೋಜನೆ ಬೇಕೋ ಅದನ್ನು ತರುವ ಶಕ್ತಿ ದೇವೇಗೌಡರಿಗೆ ಇದೆ ಎಂದು ಸವಾಲು ಹಾಕಿದರು.

ನಗರದ ಅಲ್ಪಸಂಖ್ಯಾತರು ವಾಸಿಸುವ ಸ್ಥಳಗಳಲ್ಲಿ ರಸ್ತೆ ನಿರ್ಮಾಣ ಮಾಡಲು ಹಣವನ್ನಾದರೂ ನೀಡಬಹುದಿತ್ತು. ಅಲ್ಪಸಂಖ್ಯಾತರಿಗೆ 1 ಸಾವಿರ ವಸತಿ ನೀಡಬಹುದಿತ್ತು. ಕೆಲವರು ಟೀಕೆ ಮಾಡ್ತಾರೆ ನಾನು ಅದೆಲ್ಲ ಮಾಡಲ್ಲ, ಹಾಸನ ಮಹಾನಗರ ಪಾಲಿಕೆ ಘೋಷಣೆ ಮಾಡಿದ್ರು, ಮುಂದಿನ ಚುನಾವಣೆ ವೇಳೆಗೆ ಮಹಾನಗರ ಪಾಲಿಕೆ ಆಗುತ್ತೆ. ಮಹಾನಗರ ಪಾಲಿಕೆ ಅಭಿವೃದ್ಧಿಗೆ ಹಣ ಮೀಸಲಿಟ್ಟಿಲ್ಲ. ಹಾಸನ ಜಿಲ್ಲೆಯ ಬೆಳವಣಿಗೆಯನ್ನು ಈ ಸರ್ಕಾರ ಸಹಿಸುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಜಿಲ್ಲೆಗೆ ಶಿಕ್ಷಣ, ಫ್ಲೈ ಓವರ್, ಆಸ್ಪತ್ರೆ, ಪಾರ್ಕ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ ಎಂದು ದೂರಿದರು.

7 ಗಂಟೆಗೇ ಎಣ್ಣೆ ಹಾಕ್ತಾರೆ: ಕರ್ತವ್ಯದಲ್ಲಿದ್ದಾಗ ಪೊಲೀಸರು ಏಳು ಗಂಟೆಗೇ ಎಣ್ಣೆ ಹಾಕ್ತಾರೆ. ಎಸ್ಪಿಯವರು ಇದನ್ನು ತಡೆಗಟ್ಟಬೇಕು. ಮಟ್ಕಾ, ಜೂಜು, ಮದ್ಯ ಸೇವನೆಯಿಂದ ಅವರ ಮನೆಯ ಹೆಣ್ಣು ಮಕ್ಕಳು ಒಡವೆ ಮಾರಿಕೊಳ್ಳುತ್ತಿದ್ದಾರೆ. ಎಸ್ಪಿಯವರು ಕ್ರಮ ಕೈಗೊಳ್ಳಬೇಕು, ಎಸ್ಪಿ ಯವರ ಅಧೀನ ಅಧಿಕಾರಿಗಳು ಅವರ ಕಂಟ್ರೋಲ್‌ನಲ್ಲಿ ಇಲ್ಲ। ಪೊಲೀಸರು ಕೆಲಸ ಮುಗಿಸಿ ಮನೆಗೆ ಹೋಗಿ ಕುಡಿಯಲಿ ನಾನು ಬೇಡ ಅನ್ನಲ್ಲ, ಆದರೆ ಕತ್ಯವ್ಯದಲ್ಲಿದ್ದಾಗಲೇ ಪೊಲೀಸರು ಎಣ್ಣೆ ಹಾಕ್ತಾರೆ। ಕಂಪ್ಲೆಂಟ್ ಕೊಡಲು ಬಂದವರನ್ನು ಬಾಯಿಗೆ ಬಂದಂತೆ ಬೈಯ್ತಾರೆ ಎಂದು ಬೊಟ್ಟು ಮಾಡಿದರು.

ಎಲ್ಲೆಡೆ ವ್ಹೀಲಿಂಗ್ ಪುಂಡರ ಹಾವಳಿ ಹೆಚ್ಚಾಗಿದ್ದು, ಇದಕ್ಕೂ ಎಸ್ಪಿ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು. ಸ್ಥಳೀಯ ಶಾಸಕ ಹೆಚ್. ಪಿ.ಸ್ವರೂಪ್ ಪ್ರಕಾಶ್ ಇದ್ದರು.

# ಕೌಟುಂಬಿಕ ಕಲಹ: ತಾಯಿ-ಮಗ ಆತ್ಮಹತ್ಯೆ

## ಗಂಡನ ಮನೆಗೆ ಹೊಂದಿಕೊಳ್ಳದ ಸೊಸೆ | ತಾಯಿಯನ್ನು ಬಿಟ್ಟುಕೊಡದ ಮಗ



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹೋಬಳಿ ಕಬ್ಬಳಿ ಗ್ರಾಮದಲ್ಲಿ ಕುಟುಂಬ ಕಲಹದಿಂದ ಬೇಸತ್ತು ಸೋಮವಾರ ತಾಯಿ ಹಾಗೂ ಮಗ ಕಟ್ಟೆಗೆ ಬಿದ್ದು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕಬ್ಬಳಿ ಗ್ರಾಮದ ಭರತ್(35) ಹಾಗೂ ತಾಯಿ ಜಯಂತಿ (60) ಮೃತರು. ಭರತ್ ಗಂಡಸಿ ಹೋಬಳಿ ಬಾಗೂರನಹಳ್ಳಿ ಗ್ರಾಮದ ಗೀತಾ ಎಂಬುವರೊಂದಿಗೆ 8 ತಿಂಗಳ ಹಿಂದಷ್ಟೇ ವಿವಾಹವಾಗಿದ್ದರು. ಆದರೆ ಪ್ರಾರಂಭದಿಂದಲೂ ಗಂಡ-ಹೆಂಡತಿ ನಡುವೆ ಹೊಂದಾಣಿಕೆ ಇರಲಿಲ್ಲ. ಆಗಾಗ ಜಗಳ ನಡೆಯುತ್ತಿತ್ತು ಎನ್ನಲಾಗಿದೆ.

ಇತ್ತೀಚೆಗೆ ಗಂಡ ಹಾಗೂ ಅತ್ತೆಯೊಂದಿಗೆ ಜಗಳ ಮಾಡಿಕೊಂಡಿದ್ದ ಗೀತಾ ಗಂಡನ ಮನೆ ತೊರೆದು ತವರು ಮನೆಗೆ ಹೋಗಿದ್ದಳು. ಗಂಡ ಭರತ್ ಕರೆ ಮಾಡಿ ಹಲವು ಬಾರಿ ಕರೆದರೂ ಬಂದಿರಲಿಲ್ಲ. ಭರತ್‌ಗೆ ತನ್ನ ತಾಯಿ ಎಂದರೆ ತುಂಬಾ ಪ್ರೀತಿ ಇದ್ದು ಒಂದು ಕ್ಷಣವೂ ಬಿಟ್ಟಿರುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಸಂಬಂಧಿಕರಾದ ರಮೇಶ್, ಅಶೋಕ್ ಹಾಗೂ ಇತರರು ಸೇರಿ ಫೆ. 22 ಹಾಗೂ ಮಾ.8 ರಂದು ಎರಡು ಬಾರಿ ರಾಜಿ ಪಂಚಾಯಿತಿ ಮಾಡಿದ್ದು ಗಂಡ ಹಾಗೂ ಅತ್ತೆ ಜತೆಗೆ ಇರುವಂತೆ ಹೇಳಿದ್ದರು.

ಆದರೆ ಸೊಸೆ ಅದಕ್ಕೆ ಒಪ್ಪದೆ ಮತ್ತೆ ಜಗಳ ಮಾಡಿದ್ದರಿಂದ ಮನನೊಂದು ತಾಯಿ ಮಗ ನೀರಿಗೆ ಹಾರಿದ್ದಾರೆ. ಬೆಳಿಗ್ಗೆ 8 ಗಂಟೆಯಾದರೂ ಬಾಗಿಲು ತೆರೆಯದೆ ಇದ್ದುದರಿಂದ ಅಕ್ಕಪಕ್ಕದವರು ನೋಡಿದಾಗ ಯಾರೂ ಇಲ್ಲದಿರುವುದು ಗೊತ್ತಾಗಿದೆ. ಮನೆಯಲ್ಲಿ ಡೆತ್‌ನೋಟ್ ಸಿಕ್ಕಿದ್ದು ಅದರ ಆಧಾರದಡಿ ಕಟ್ಟೆಗೆ ತೆರಳಿ ಪರಿಶೀಲಿಸಿದಾಗ ಇಬ್ಬರ ಚಪ್ಪಲಿಗಳು ಸಿಕ್ಕಿವೆ. ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೃತದೇಹಗಳನ್ನು ಹೊರಗೆ ತೆಗೆದಿದ್ದಾರೆ. ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ನಂತರ ಅಂತ್ಯಕ್ರಿಯೆ ನೆರವೇರಿತು.

ಸಿಸಿಟಿವಿ ಕ್ಯಾಮರಾದಲ್ಲಿ ಸೆರೆ: ಸೋಮವಾರ ಬೆಳಗಿನ ಜಾವ 3.15ರ ಸುಮಾರಿನಲ್ಲಿ ತಾಯಿ ಹಾಗೂ ಮಗ ಗ್ರಾಮದ ದೇಗುಲದ ಮುಂದೆ ಕೈ ಮುಗಿದು ಅಲ್ಲಿಂದ ಕಟ್ಟೆ ಕಡೆಗೆ ರಸ್ತೆಯಲ್ಲಿ ನಡೆದು ಹೋಗಿರುವ ದೃಶ್ಯ ಮನೆಯೊಂದರ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಡೆತ್‌ನೋಟ್‌ನಲ್ಲಿ ಏನಿದೆ: ಮನೆಯಲ್ಲಿ ಡೆತ್ ನೋಟ್ ಸಿಕ್ಕಿದ್ದು, ನಾನು ಮದುವೆಯಾಗಿರುವ ಗೀತಾ ಎಂಬವಳು ನನ್ನ ಕರ್ಮವನ್ನು ಮಾಡಬಾರದು. ನಾವು ಕಷ್ಟಪಟ್ಟು ಕಟ್ಟಿರುವ ಮನೆಯೊಳಗೆ ಬರಬಾರದು ಹಾಗೂ ನನ್ನ ಕರ್ಮಗಳನ್ನು ಆಕೆ ಯಾವುದೇ ಕಾರಣಕ್ಕೂ ಮಾಡಬಾರದು ಹಾಗೂ ಇನ್ನೂ ಹಲವು ವಿಚಾರಗಳನ್ನು ಬರೆದಿದ್ದಾನೆ ಎಂದು ಸಂಬಂಧಿ ಕರು ತಿಳಿಸಿದರು. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಾಸನ: ವ್ಯಂಗ್ಯಚಿತ್ರ ಕಾರ್ಯಾಗಾರ ಇಂದು

ಹಾಸನ: ನಗರದ ಆರ್.ಸಿ. ರಸ್ತೆ (ಗಂಧದ ಕೋಠಿ) ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಮಾ. 11ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ ವ್ಯಂಗ್ಯಚಿತ್ರ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಹಿರಿಯ ವ್ಯಂಗ್ಯಚಿತ್ರಕಾರ ಎಂ.ವಿ. ಶಿವರಾಂ ಸಮಾರಂಭ ಉದ್ಘಾಟಿಸುವರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ. ಸಿ.ಎಲ್. ಶಿವಕುಮಾರ್, ಐಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಪತ್ರಿಕೋದ್ಯಮ ಉಪನ್ಯಾಸಕರಾದ ಎಚ್.ಕೆ. ದಿಲೀಪ್ ಕುಮಾರ್, ಸಿ.ಪಿ. ಕಾವ್ಯ ಭಾಗವಹಿಸುವರು. ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

# ದೇಶಾಣಿ ಪ್ರಾಥಮಿಕ ಕೃಷಿ ಪತ್ತಿನ ಸಂಘಕ್ಕೆ ಚುನಾವಣೆ



ಅರಸೀಕೆರೆ: ತಾಲ್ಲೂಕಿನ ದೇಶಾಣಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಸೋಮವಾರ ಚುನಾವಣೆ ನಡೆದಿದ್ದು ಜೆಡಿಎಸ್-ಬಿಜೆಪಿ ಬೆಂಬಲಿತ ಸದಸ್ಯರು ಗೆಲುವು ಸಾಧಿಸಿದರು.

ಚುನಾವಣಾಧಿಕಾರಿಯಾಗಿ ದೇವರಾಜ್ ಕಾರ್ಯನಿರ್ವಹಿಸಿ ದರು. 12 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 7, ಬಿಜೆಪಿ 4 ಹಾಗೂ ಕಾಂಗ್ರೆಸ್ ಬೆಂಬಲಿತ ಒಬ್ಬರು ಗೆಲುವಿನ ನಗೆ ಬೀರಿದರು.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಸಾಲಗಾರರಲ್ಲದ ಕ್ಷೇತ್ರದಲ್ಲಿ ಒಟ್ಟು 160 ಮತದಾರರಿದ್ದಾರೆ. ಈ ಪೈಕಿ 137 ಮತದಾರರು ಮತ ಚಲಾಯಿಸಿದ್ದಾರೆ. ಜೆಡಿಎಸ್-ಬಿಜೆಪಿ ಬೆಂಬಲಿತ ಶಂಕರಪ್ಪ 74 ಮತ ಪಡೆದು ಜಯಶೀಲರಾಗಿದ್ದಾರೆ.

ಸಾಲಗಾರರ ಕ್ಷೇತ್ರದ 11 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 670ರ ಪೈಕಿ 420 ಮತದಾರರು ಮತ ಚಲಾಯಿಸಿದ್ದಾರೆ. ಜೆಡಿಎಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳಾದ ಕುಮಾರಿ, ಗುರುಮೂರ್ತಿ ಸ್ವಾಮಿ, ಚಂದ್ರಶೇಖರ್, ತಾಂಡೇಶ್ವರ, ಬಸವರಾಜು, ಎಂ.ಎಂ. ಬಸವರಾಜು, ಭಾನುಪ್ರಕಾಶ್, ಮಲ್ಲಿಕಾರ್ಜುನ್, ಮೂರ್ತಿ ಭೋವಿ, ಯಶೋಧಮ್ಮ ಜಯ ಸಾಧಿಸಿದರೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ದೇಶಾಣಿ ಆನಂದ್ ಗೆಲುವು ದಾಖಲಿಸಿದರು.

# ಡಿವೈಡರ್‌ಗೆ ಬೈಕ್ ಡಿಕ್ಕಿ: ವ್ಯಕ್ತಿ ಸಾವು

ಹಾಸನ: ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಡಿವೈಡರ್‌ಗೆ ಡಿಕ್ಕಿಯಾಗಿ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಗರದ ಆಡುವಳ್ಳಿ ರಸ್ತೆಯಲ್ಲಿ ಶನಿವಾರ ನಡೆದಿದೆ.

ಕುಂಬಾರ ಬೀದಿ ನಿವಾಸಿ ಲೇಪಾಕ್ಷಿಕುಮಾರ್ (50) ಮೃತರು. ಎನ್‌ಆರ್ ವೃತ್ತಕ್ಕೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಬೈಕ್ ಡಿವೈಡರ್‌ಗೆ ಡಿಕ್ಕಿಯಾಗಿದೆ. ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹನುಮಂತಪುರದಲ್ಲಿ ಮನೆಗಳವು

ಹಾಸನ: ತಾಲ್ಲೂಕಿನ ಹನುಮಂತಪುರದಲ್ಲಿ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 4.65 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ.

ಆರ್. ಭವ್ಯ ಅವರು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಸಕಲೇಶಪುರ ತಾಲ್ಲೂಕಿನ ಹಲಸುಲಿಗೆ ಗ್ರಾಮದ ಸಂಬಂಧಿಕರ ಮನೆಗೆ ಮಾ. 8ರಂದು ತೆರಳಿದ್ದರು.

ಮಾರನೇ ದಿನ ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿ ಬೀರು ಪರಿಶೀಲಿಸಿದಾಗ ಅದರಲ್ಲಿದ್ದ 80 ಸಾವಿರ ರೂ. ನಗದು, 10 ಗ್ರಾಂ ತೂಕದ ಚಿನ್ನದ ಸರ, 10 ಗ್ರಾಂ ತೂಕದ ಚಿನ್ನದ ಓಲೆ, 5 ಗ್ರಾಂ ತೂಕದ 2 ಚಿನ್ನದ ಓಲೆ, 5 ಗ್ರಾಂ ತೂಕದ ಚಿನ್ನದ ಉಂಗುರ, 2 ಗ್ರಾಂ ಉಂಗುರ, 5 ಗ್ರಾಂ ಚಿನ್ನದ ಉಂಗುರ, 10 ಗ್ರಾಂ ತೂಕದ ಚಿನ್ನದ ಬಳೆ ಕಳುವಾಗಿರುವುದು ತಿಳಿದಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಭಾರತೀಯ ಪರಂಪರೆ ಮರೆಯಬಾರದು: ಬಾಲಕೃಷ್ಣ



ಚನ್ನರಾಯಪಟ್ಟಣ: ಭಾರತವು ಗಟ್ಟಿತನದ ಪ್ರಜಾಪ್ರಭುತ್ವದೊಂದಿಗೆ ವಿವಿಧತೆಯಲ್ಲಿ ಏಕತೆ ಸಾಧಿಸಿರುವ ವಿಶ್ವದ ಏಕಮಾತ್ರ ದೇಶ. ಪರಂಪರೆಯನ್ನು ಯಾರೂ ಮರೆಯಬಾರದು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ಭಾರತವು ಒಕ್ಕೂಟ ವ್ಯವಸ್ಥೆಯೊಂದಿಗೆ ಮುನ್ನಡೆಯುತ್ತಿದ್ದು ಪ್ರಪಂಚದಲ್ಲಿಯೇ ಅತಿಹೆಚ್ಚು ಯುವ ಸಮುದಾಯ ಹೊಂದಿದೆ. ಭವಿಷ್ಯದ ದೃಷ್ಟಿಯಿಂದ ದೇಶದ ಆಡಳಿತ ನಡೆಯಬೇಕಿದೆ. ಸಮನ್ವಯ ಕೊರತೆ ಸಂಘರ್ಷಕ್ಕೆ ಕಾರಣವಾಗಬಾರದು ಎಂದು ತಿಳಿಸಿದರು.

ಆರ್ಥಿಕತೆಯಲ್ಲಿ ದೇಶವು 5ನೇ ಆರ್ಥಿಕ ಶಕ್ತಿಯಾಗಿ ಬೆಳೆದಿದ್ದು ಭವಿಷ್ಯದಲ್ಲಿ ವಿಶ್ವಗುರು ಆಗಲಿದೆ. ಯಾವುದೇ ದೇಶವು ಸಂಕಷ್ಟಕ್ಕೆ ಸಿಲುಕಿದರೂ ಭಾರತ ತಕ್ಷಣ ಸ್ಪಂದಿಸಿ ಆ ದೇಶದ ನೆರವಿಗೆ ನಿಲ್ಲುತ್ತದೆ. ಅದೆಷ್ಟೋ ದೇಶಗಳು ಕೆಲವೊಂದು ವಿಚಾರಗಳಲ್ಲಿ ಭಾರತದ ನಿರ್ಣಯ ಕಾಯುವ ಮಟ್ಟಕ್ಕೆ ಬಲಿಷ್ಠವಾಗಿ ಗುರುತಿಸಿಕೊಂಡಿದೆ ಎಂದು ಕೇಂದ್ರ ಸರ್ಕಾರದ ಆಡಳಿತವನ್ನು ಮೆಚ್ಚಿದರು. ಜನಪ್ರತಿನಿಧಿಗಳ ಆಯ್ಕೆ ಮಾಡುವಾಗ ಮತದಾರನ ಪಾತ್ರ ಪ್ರಮುಖವಾಗಿದೆ. ಹಣ ಇದ್ದರೆ ಎಲ್ಲವೂ ಸಾಧ್ಯ ಎಂಬುದು ವಿಪರ್ಯಾಸದ ಸಂಗತಿ. ಆದರೆ ದೇಶದ ಅಭಿವೃದ್ಧಿ ಹಾಗೂ ಜನಸ್ಪಂದನೆಗೆ ಮತದಾರ ಮನ್ನಣೆ ನೀಡಬೇಕು ಎಂದು ಎಚ್ಚರಿಸಿದರು.

ದೇಶ ಹಾಗೂ ರಾಜ್ಯದಲ್ಲಷ್ಟೇ ಅಲ್ಲದೆ ಜಿಲ್ಲೆಯಲ್ಲಿಯೂ ಡ್ರಗ್ಸ್ ಮಾಫಿಯಾ ಹೆಚ್ಚಿದ್ದು ಯುವ ಸಮುದಾಯ ದಾರಿ ತಪ್ಪುತ್ತಿದೆ. ನಿರುದ್ಯೋಗದ ಪರಿಣಾಮ ಜೀವನ ಸಾಗಿಸಲು ಕಷ್ಟವಾದ ವೇಳೆ ಯುವ ಸಮುದಾಯ ಅಡ್ಡದಾರಿ ಹಿಡಿಯುತ್ತಿರುವುದು ದೇಶದ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್.ಎಲ್. ಮಲ್ಲೇಶ್ ಗೌಡ ಮಾತನಾಡಿ, ಮಕ್ಕಳು ದೇಶದ ಆಸ್ತಿ. ಅವರನ್ನು ಒಳ್ಳೆಯ ದಾರಿಯಲ್ಲಿ ಕರೆದೊಯ್ಯುವುದು ನಮ್ಮೆಲ್ಲರ ಕರ್ತವ್ಯ. ಆದರೆ ಸರಿಯಾದ ವ್ಯವಸ್ಥೆಯನ್ನು ರೂಪಿಸುವಲ್ಲಿ ಸೋತಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು.

ಕಳೆದ 25 ವರ್ಷಗಳ ಹಿಂದೆ ಈ ನೆಲದ ರುಚಿ ಬೇರೆ ಇತ್ತು. ಆದರೆ ಇಂದು ಹದಗೆಟ್ಟಿದೆ. ಗಾಳಿ, ನೀರು ಹಾಗೂ ವಾತಾವರಣ ಕೆಟ್ಟು ಹೋಗಿದೆ. ಬದುಕು ಸಹ ಆರೋಗ್ಯಕರವಾಗಿಲ್ಲ. ಪರಸ್ಪರ ಸಂಬಂಧಗಳು ಹಾಳಾಗಿದ್ದು ಮೌಲ್ಯ ಕಳೆದುಕೊಂಡಿದೆ. ಯುವ ಸಮುದಾಯವು ಎಚ್ಚೆತ್ತು ಮೂಲ ವ್ಯವಸ್ಥೆ ರೂಪಿಸುವಲ್ಲಿ ಮುಂದಾಗಬೇಕಿದೆ ಎಂದು ಸಲಹೆ ನೀಡಿದರು.

ಅರಕಲಗೂಡು, ಸಕಲೇಶಪುರ, ಹಾಸನ, ಮೊಸಳೆ ಹೊಸಹಳ್ಳಿ, ಜಾವಗಲ್, ಚನ್ನರಾಯಪಟ್ಟಣ ಸೇರಿದಂತೆ ಸುಮಾರು 20 ಕಾಲೇಜುಗಳಿಂದ 30 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ಮೊಸಳೆ ಹೊಸಹಳ್ಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಕೆ.ವಿ. ಅಮೂಲ್ಯ(ಪ್ರಥಮ), ಜಾವಗಲ್ ಕಾಲೇಜಿನ ಎ.ವಿ.ಕವನ (ದ್ವಿತೀಯ), ಚನ್ನರಾಯಪಟ್ಟಣ ಕಾಲೇಜಿನ ಹರ್ಷಿತ (ತೃತೀಯ) ಹಾಗೂ ಹಿರೀಸಾವೆ ಕಾಲೇಜಿನ ಜಿ.ಎಲ್. ದಿಗಂತ್ ನಾಲ್ಕನೇ ಸ್ಥಾನಕ್ಕೆ ಭಾಜನರಾದರು.

ಕಸಾಪ ತಾಲ್ಲೂಕು ಅಧ್ಯಕ್ಷ ಎಚ್.ಎನ್. ಲೋಕೇಶ್, ಹಿರೀಸಾವೆ ಹೋಬಳಿ ಅಧ್ಯಕ್ಷ ಹೆಚ್.ಎ. ಪ್ರಮೋದ್, ಮಾಜಿ ಅಧ್ಯಕ್ಷ ಎಚ್.ಇ.ಬೋರಣ್ಣ, ಡಾ. ಎಚ್.ಪಿ.ಶಂಕರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಜೆ.ಮಹೇಶ್, ಪ್ರಾಂಶುಪಾಲ ಬಿ.ಎಚ್. ಲಕ್ಷ್ಮಣಗೌಡ, ಎಂ.ಶಂಕರ್, ಪ್ರಮುಖರಾದ ಎಚ್.ಜಿ. ರಾಮಕೃಷ್ಣ, ಬಿ.ಆರ್. ಬೊಮ್ಮೇಗೌಡ, ಜಬಿವುಲ್ಲಾ ಬೇಗ್, ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಎಸ್.ಆರ್. ಆಶಾ ಹಾಗೂ ಇತರರಿದ್ದರು.

# ಅರ್ಥಶಾಸ್ತ್ರ ಅಧ್ಯಯನ ಜೀವನಕ್ಕೆ ಸಹಕಾರಿ



ಹಾಸನ: ವಿದ್ಯಾರ್ಥಿಗಳ ಜೀವನಕ್ಕೆ ಅರ್ಥಶಾಸ್ತ್ರ ಮುಖ್ಯ ಪಠ್ಯವಾಗಿದೆ ಎಂದು ಚನ್ನರಾಯಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ. ಬಿ.ಎಸ್. ಪೂರ್ಣಿಮಾ ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಸಮಗ್ರ ಅರ್ಥಶಾಸ್ತ್ರದ ಸಮಸ್ಯೆಗಳು ಮತ್ತು ಸವಾಲುಗಳು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಅರ್ಥಶಾಸ್ತ್ರವನ್ನು ಕಠಿಣವಾದ ವಿಷಯವೆಂದು ವಿದ್ಯಾರ್ಥಿಗಳು ಭಾವಿಸಿದ್ದಾರೆ. ಆದರೆ ಅದಕ್ಕಿಂತ ಸರಳವಾದ ವಿಷಯವಿಲ್ಲ. ಅರ್ಥಶಾಸ್ತ್ರದ ವಿದ್ಯಾರ್ಥಿಗಳು ಹಿಂಜರಿಕೆ ಮನೋಭಾವನೆ ಬಿಟ್ಟು ಕಲಿಕೆಯಲ್ಲಿ ಮುನ್ನಡೆಯಬೇಕು. ಅತಿ ಹೆಚ್ಚು ವ್ಯಾಸಂಗ ಮಾಡಿದರೆ ಪರಿಹಾರವನ್ನು ಅದರಲ್ಲೇ ಕಂಡುಕೊಳ್ಳಬಹುದು. ನಿರುದ್ಯೋಗ ಹಾಗೂ ಹಣದುಬ್ಬರ ಸಮಸ್ಯೆಗಳ ನಡುವಿನ ವ್ಯತ್ಯಾಸವನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ವಿದ್ಯಾರ್ಥಿಗಳಿಗೆ ಅರ್ಥಶಾಸ್ತ್ರ ವಿಷಯದ ಕುರಿತು ಜಾಗೃತಿ ಮೂಡಿಸಿದರು. ಪ್ರಸ್ತುತ ಸನ್ನಿವೇಶಕ್ಕೆ ಹಣ ಎಷ್ಟು ಮುಖ್ಯ ಮತ್ತು ಆರ್.ಬಿ.ಐ ನ ಕಾರ್ಯಗಳನ್ನು ತಿಳಿಸಿದರು. ಹಣವನ್ನು ಸಂಪಾದನೆ ಮಾಡಲು ಒಳ್ಳೆಯ ಮಾರ್ಗವನ್ನು ಅನುಸರಿಸಬೇಕೆಂದು ವಿದ್ಯಾರ್ಥಿಗಳಿಗೆ ಹಿತ ನುಡಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಎಂ.ವಿ. ಹೇಮಾವತಿ, ಉಪನ್ಯಾಸಕರಾದ ಎ.ಕೆ. ಮಂಜುನಾಥ, ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್ ಕುಮಾರ್ ಹಾಗೂ ಇತರರು ಹಾಜರಿದ್ದರು.

ಕನ್ನಡ ಪೋಸ್ಟ್

E-mail : kannadapostnews@gmail.com facebook.com / ಕನ್ನಡ post



# ಬರವಣಿಗೆ ಸಾವಿರಾರು ವರ್ಷ ಜೀವಂತ

## ಸಾಹಿತಿ ಎಸ್.ಎಲ್. ಭೈರಪ್ಪ | ಸಂತೇಶಿವರದಲ್ಲಿ ಕೃತಜ್ಞತರ್ಪಣಾ ಸಮಾರಂಭ

ಚನ್ನರಾಯಪಟ್ಟಣ: ನಾನು ಗತಿಸಿದರೂ ರಚಿಸಿದ ಸಾಹಿತ್ಯ ಸಾವಿರಾರು ವರ್ಷಗಳ ವರೆಗೆ ಇರಬೇಕೆಂಬ ಆಸೆಯಿಂದ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದೆ ಎಂದು ಸಾಹಿತಿ ಡಾ. ಎಸ್. ಎಲ್. ಭೈರಪ್ಪ ಹೇಳಿದರು.

ತಾಲ್ಲೂಕಿನ ಸಂತೇಶಿವರ ಗ್ರಾಮದಲ್ಲಿ ಭಾನುವಾರ ಗ್ರಾಮಸ್ಥರು ಹಾಗೂ ಸಾಹಿತ್ಯಾಭಿಮಾನಿಗಳು ಹಮ್ಮಿಕೊಂಡಿದ್ದ ಕೃತಜ್ಞತಾರ್ಪಣಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಾಹಿತ್ಯ ಹಾಗೂ ಬರವಣಿಗೆಗೆ ಎಂದಿಗೂ ಕೊನೆ ಇಲ್ಲ ಎಂದರು.

ನಾನು ರಾಮಾಯಣದ ಉತ್ತರದಿಂದ ದಕ್ಷಿಣ ಧೃವದ ವರೆಗೂ ಓದಿದ್ದೇನೆ. ಸಾಕಷ್ಟು ದೇಶಗಳನ್ನು ಸುತ್ತಿದ್ದೇನೆ. ಎಲ್ಲ ಭಾಷೆಗಳಲ್ಲಿಯೂ ಸಾಹಿತ್ಯ ಇದೆ. ಆದರೆ ಕನ್ನಡ ಬಾಷೆಯಷ್ಟು ಸುಂದರ ಹಾಗೂ ಸುಸಲಿತ ಭಾಷೆ ಮತ್ತೊಂದಿಲ್ಲ ಎಂದು ಬಣ್ಣಿಸಿದರು.

ದೇವಸ್ಥಾನ ಇರುವ ಊರು ಸ್ವರ್ಗದಂತೆ ಇರಲಿದೆ. ಗ್ರಾಮದ ದೇಗುಲ ಜೀರ್ಣೋದ್ಧಾರಕ್ಕೆ ಸಹಕಾರ ಮಾಡಿದ್ದೇನೆ. ಯಾವುದೇ ಗ್ರಾಮವಾಗಲಿ ದೇಗುಲ ನಿರ್ಮಾಣ ಇಲ್ಲವೇ ಜೀರ್ಣೋದ್ಧಾರ ಕಾರ್ಯಕ್ಕೆ ಎಲ್ಲರೂ ಕೈಲಾದಷ್ಟು ದೇಣಿಗೆ ನೀಡಬೇಕು ಎಂದು ಕೋರಿದರು.

ನನ್ನ ಈ ಎಲ್ಲ ಸಾಧನೆಗೆ ನನ್ನ ತಾಯಿಯೇ ಸ್ಫೂರ್ತಿ. ಅವಳೇ ನನಗೆ ದೈವ ಸ್ವರೂಪಿ. ಆಕೆಯ ಆಶೀರ್ವಾದಿಂದಲೇ ಇಷ್ಟೆಲ್ಲ ಬರವಣಿಗೆ ಸಾಧ್ಯವಾಯಿತು ಎಂದರು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಸರಸ್ವತಿ ಯಾರಿಗೂ ಸುಲಭವಾಗಿ ಒಲಿಯುವುದಿಲ್ಲ. ಶ್ರದ್ಧೆ, ಶಿಸ್ತು ಹಾಗೂ ಸೌಮ್ಯತೆ ಇರಬೇಕು. ಅದು ಎಸ್. ಎಲ್. ಭೈರಪ್ಪ ಅವರಲ್ಲಿದೆ. ಸಾಹಿತ್ಯ ಕ್ಷೇತ್ರಕ್ಕೆ ತನ್ನ ಬದುಕನ್ನೇ ಮುಡುಪಾಗಿಟ್ಟದ್ದು ವಿಶ್ವವನ್ನೇ ಗೆದ್ದಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂತೇಶಿವರ ಹಾಗೂ ಸುತ್ತಲಿನ ನೀರಾವರಿ ಯೋಜನೆಯ ಹಿಂದೆ ವಿಶ್ವ ಸಾಹಿತಿ ಎಸ್.ಎಲ್.



ಭೈರಪ್ಪ ಅವರ ಪರಿಶ್ರಮವಿದೆ. ಮೈಸೂರು ದಸರಾ ಉದ್ಘಾಟನೆಯ ವೇಳೆ ತನ್ನ ಹುಟ್ಟೂರಿನ ಕೆರೆಗೆ ನೀರು ಹರಿಸುವ ಯೋಜನೆಯನ್ನು ಕಲ್ಪಿಸುವಂತೆ ಕೇಳಿಕೊಂಡರು. ತನ್ನ ಸ್ವಾರ್ಥಕ್ಕಾಗಿ ಏನನ್ನೂ ಕೇಳಲಿಲ್ಲ. ತಕ್ಷಣ ಸಂತೇಶಿವರ ಏತನೀರಾವರಿ ಯೋಜನೆಗೆ 25 ಕೋಟಿ ರೂ. ಮಂಜೂರು ಮಾಡಲಾಗಿದ್ದು ವ್ಯಾಪ್ತಿಯ ಎಲ್ಲ ಕೆರೆಗಳಿಗೂ ಇಂದು ನೀರು ತುಂಬಿಸಲಾಗಿದೆ ಎಂದರು.

ಬದುಕಿನ ಸಾಕ್ಷಾತ್ಕಾರಕ್ಕೆ ಜ್ಞಾನ ಹಾಗೂ ಧ್ಯಾನ ಅಗತ್ಯ. ಅದನ್ನು ಸಾಧಿಸಿದಲ್ಲಿ ಜೀವನದಲ್ಲಿ ಎಲ್ಲವೂ ಸಿಗಲಿದೆ. ಮಗುವಿನಲ್ಲಿ ಇದ್ದ ಮುಗ್ಧತೆ ಕೊನೆಯ ವರೆಗೂ ಉಳಿಸಿಕೊಳ್ಳುವುದು ಕಷ್ಟದ ಸಂಗತಿ. ಆದರೆ ಎಸ್.ಎಲ್. ಭೈರಪ್ಪ ಅವರಲ್ಲಿ ಇಂದಿಗೂ ಅದೇ ಮುಗ್ಧತೆ ಇದೆ. ಇದು ಅವರ ಜೀವಮಾನ ಸಾಧನೆಗೆ ಕಾರಣವಾಗಿದೆ ಎಂದು ತಿಳಿಸಿದರು.

ಮೈಸೂರು ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಸತ್ಯವನ್ನು ಇದ್ದಂತೆಯೇ ಯಥಾವತ್ತಾಗಿ ಸಾಹಿತ್ಯ ರೂಪದಲ್ಲಿ ಮಂಡಿಸುವ ಮೂಲಕ ಸಾಹಿತ್ಯಾಭಿಮಾನಿಗಳಿಗೆ ರುಚಿಕರವಾದ ಸಾಹಿತ್ಯದೌತಣವನ್ನು ಬಡಿಸಿರುವ ಎಸ್.ಎಲ್.ಭೈರಪ್ಪ ಅವರ ಸಾಧನೆ ಉತ್ತುಂಗ ಶಿಖರವಾಗಿದೆ ಎಂದರು.

ಸಂಸದ ಶ್ರೇಯಸ್ ಎಂ.ಪಟೇಲ್ ಮಾತನಾಡಿ, ವೃತ್ತಿಯ ಜತೆಗೆ ಊರಿನ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡಿದ್ದು ಹುಟ್ಟೂರು ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಕೆರೆಗಳಿಗೂ ನೀರು ತುಂಬಿಸುವ ಮೂಲಕ ಈ ಭಾಗದ ಭಗೀರಥ ಎನಿಸಿಕೊಂಡಿದ್ದಾರೆ ಎಂದು ಎಸ್.ಎಲ್.ಭೈರಪ್ಪ ಅವರನ್ನು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಎಸ್.ಎಲ್.ಭೈರಪ್ಪ ಅವರಿಗೆ ಅವರೇ ಸಾಟಿ. ಸಾಹಿತ್ಯದ ಬೇರನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಯುವ ಸಾಹಿತಿಗಳಿಗೆ ಇವರ ಸಾಧನೆ ಮಾರ್ಗದರ್ಶನವಾಗಲಿದೆ ಎಂದರು.

ಸಂತೇಶಿವರ ಏತ ನೀರಾವರಿ ಯೋಜನೆಯು ವಿಶ್ವ ಸಾಹಿತಿ ಎಸ್.ಎಲ್. ಭೈರಪ್ಪ ಅವರ ಕನಸಿನ ಕೂಸಾಗಿದ್ದು ಅವರ ಹೋರಾಟದ ಪ್ರತಿಫಲವಾಗಿ ಇಂದು ನನಸಾಗಿದೆ. ಈ ಯೋಜನೆಯಿಂದ ವ್ಯಾಪ್ತಿಯ ಬಹುತೇಕ ಕೆರೆಗಳಿಗೆ ನೀರು ತುಂಬಿಸಲಾಗಿದ್ದು ಸಾವಿರಾರು ರೈತ ಕುಟುಂಬಗಳ ಬದುಕು ಹಸನಾಗಿದೆ. ಈ ಯೋಜನೆಗೆ ಎಸ್.ಎಲ್. ಭೈರಪ್ಪ ಅವರ ಹೆಸರಿಡಬೇಕು ಎಂದು ಮನವಿ ಮಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ ಮಾತನಾಡಿ, ಕಲೆ, ಸಾಹಿತ್ಯ ಹಾಗೂ ಇತಿಹಾಸವನ್ನು ಬರವಣಿಗೆಯ ಮೂಲಕ ಜೀವಂತವಾಗಿ ಇರಿಸುವಲ್ಲಿ ಸಾಹಿತಿಗಳ ಕಾಯಕ ಶ್ಲಾಘನೀಯ. ರಾಜಕೀಯವನ್ನು ಬದಿಗಿಟ್ಟು ಸಮಾಜದ ಅಭಿವೃದ್ಧಿಗೆ ಎಲ್ಲರೂ ಕೈ ಜೋಡಿಸೋಣ ಎಂದು ಕರೆ ನೀಡಿದರು.

ಪತ್ರಕರ್ತ ವಿಶ್ವೇಶ್ವರ ಭಟ್ ಮಾತನಾಡಿ, ಎಸ್.ಎಲ್. ಭೈರಪ್ಪ ಅವರು ಜಿಲ್ಲೆ, ರಾಜ್ಯ ಹಾಗೂ ದೇಶಕ್ಕಷ್ಟೇ ಅಲ್ಲದೆ ವಿಶ್ವ ವ್ಯಾಪ್ತಿಯಲ್ಲಿ ಗುರುತಿಸಿಕೊಂಡಿರುವ ಸಾಹಿತಿ. ಇವರ ಕಾದಂಬರಿಗಳನ್ನು ಓದುತ್ತಿದ್ದರೆ ಕಣ್ಣ ಮುಂದೆಯೇ ದೃಶ್ಯ ಹಾಗೂ ಚಿತ್ರಣಗಳು ಮೂಡಿಬಂದಂತೆ ಭಾಸವಾಗುತ್ತದೆ ಎಂದರು.

ಕೆಲ ವರ್ಷಗಳ ಹಿಂದೆ ಜರ್ಮನಿಯಲ್ಲಿ ನಡೆದ ಪುಸ್ತಕ ಮೇಳದಲ್ಲಿ ಎಸ್.ಎಲ್.ಭೈರಪ್ಪ ಅವರ ಕಾದಂಬರಿ ಕಂಡುಬಂದಿದ್ದು ಅವರ ಕಾದಂಬರಿ ಭಾರತ ದೇಶವನ್ನು ಪ್ರತಿನಿಧಿಸಿತ್ತು. ಇವರ ಹೆಸರು ವಿಶ್ವ ಸಾಹಿತ್ಯ ನಕಾಶೆಯಲ್ಲಿ ಇದೆ. ಇವರ ಬಹುತೇಕ ಕೃತಿಗಳು 30ಕ್ಕೂ ಹೆಚ್ಚು ಭಾಷೆಗಳಲ್ಲಿ ಅನುವಾದಗೊಂಡಿರುವುದು ಹೆಮ್ಮೆಯ ಸಂಗತಿ ಎಂದು ವರ್ಣಿಸಿದರು.


ಇನ್ನು ಹುಟ್ಟೂರಿನ ಬಗ್ಗೆ ಇವರು ಇರಿಸಿರುವ ಕಾಳಜಿ ಹೇಳಬೇಕೆಂದರೆ ಸಾಕಷ್ಟು ವಿಷಯಗಳಿವೆ. ಮೈಸೂರಿನ ದಸರಾ ವೇಳೆ ತನಗೆ ಸಿಗುವ ಉದ್ಘಾಟನಾ ಅವಕಾಶ ಹಾಗೂ ಸನ್ಮಾನವನ್ನು ಲೆಕ್ಕಿಸದೆ ಮೊದಲು ನನ್ನೂರಿನ ಕೆರೆಗೆ ನೀರು ಬೇಕು ಎಂದು ಕೇಳಿದ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಭೈರಪ್ಪ ಅವರ ಪತ್ನಿ ಸರಸ್ವತಿ, ತಿಪಟೂರು ಶಾಸಕ ಷಡಕ್ಷರಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಗೀತಾ ಸೋಮಶೇಖರ್, ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಎ.ರಂಗಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಎಚ್.ಎನ್. ಮಲ್ಲೇಶ್, ಗೌರಮ್ಮ ಸ್ಮಾರಕ ಟ್ರಸ್ಟ್ ಕಾರ್ಯದರ್ಶಿ ಕೃಷ್ಣ ಪ್ರಸಾದ್, ಪ್ರಮುಖರಾದ ರಾಜಣ್ಣ, ಬಸವರಾಜ್ ಮತ್ತಿತರರಿದ್ದರು.

## ಸಂತೇಶಿವರದಲ್ಲಿ ಹಬ್ಬದ ವಾತಾವರಣ



ಚನ್ನರಾಯಪಟ್ಟಣ: ತಾಲ್ಲೂಕಿನ ಸಂತೇಶಿವರದಲ್ಲಿ ಹಮ್ಮಿಕೊಂಡಿದ್ದ ಹಿರಿಯ ಸಾಹಿತಿ ಎಸ್. ಎಲ್. ಭೈರಪ್ಪ ಅವರ ಕೃತಜ್ಞಾರ್ಪಣಾ ಸಮಾರಂಭ ಅಂಗವಾಗಿ ಚಿಕ್ಕೋನಹಳ್ಳಿ ಗೇಟ್ ಬಳಿಯಿಂದ ಸಂತೆಶಿವರದ ವರೆಗೆ ಬೆಳ್ಳಿ ಸಾರೋಟಿನಲ್ಲಿ ಅದ್ದೂರಿ ಮೆರವಣಿಗೆ ನಡೆಸಲಾಯಿತು. ಅದಕ್ಕೂ ಮೊದಲು ಪೂರ್ಣಕುಂಭ ಮೆರವಣಿಗೆಯಲ್ಲಿ ಗ್ರಾಮದ ಮಹಿಳೆಯರು ಊರ ಕೆರೆಯಿಂದ ಗಂಗೆಯನ್ನು ಹೊತ್ತು ತಂದರು. ಹಳ್ಳಿಕಾರ್ ಎತ್ತುಗಳು ಮೆರವಣಿಗೆಗೆ ಸಾಥ್ ನೀಡುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ಬಂದಿತು. ಭೈರಪ್ಪ ರಚಿತ 27 ಕಾದಂಬರಿಗಳ ಸ್ತಬ್ಧಚಿತ್ರಗಳ ಮೆರವಣಿಗೆ ನಡೆಯಿತು. ಚಿಕ್ಕಹೊನ್ನೇನಹಳ್ಳಿ ಗೇಟ್ ನಲ್ಲಿ ಟ್ಯಾಬ್ಲೋಗಳ ವೀಕ್ಷಿಸಿದ ಭೈರಪ್ಪನವರು ಹರ್ಷ ವ್ಯಕ್ತಪಡಿಸಿದರು.



ಮೆರವಣಿಗೆಯಲ್ಲಿ ಕಂಸಾಲೆ, ಕೋಲಾಟ, ಜಾನಪದ ಹಾಗೂ ವೀರಗಾಸೆ ಕುಣಿತ ಮೇಳೈಸಿದವು.

ಸಿಂಗಾರಗೊಂಡ ಊರು: ಭೈರಪ್ಪನವರಿಗೆ ಅಭಿನಂದನಾ ಸಮಾರಂಭ ಅಂಗವಾಗಿ ಸಂತೇಶಿವರ ಗ್ರಾಮ ಮದುವಣಗಿತ್ತಿಯಂತೆ ಸಿಂಗಾರಗೊಂಡಿತ್ತು. ಪ್ರತಿ ಮನೆ ಮುಂದೆ ರಂಗೋಲಿ ಬಿಡಿಸಿ ಅಲಂಕಾರ ಮಾಡಲಾಗಿತ್ತು. ಪ್ರತಿ ಮನೆಯು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮೆರವಣಿಗೆಯಲ್ಲಿ ಬಂದ ಭೈರಪ್ಪನವರಿಗೆ ಹಾರು, ಶಾಲು ಮೈಸೂರು ಪೇಟ ತೊಡಿಸಿ ಸನ್ಮಾನಿಸಿದ್ದು ತವರೂರ ಪ್ರೀತಿಗೆ ಭೈರಪ್ಪ ಮನಸೋತರು.

ವಸ್ತುಪ್ರದರ್ಶನಕ್ಕೆ ಮೆಚ್ಚುಗೆ: ನವೀಕೃತ ಗೌರಮ್ಮ ಸ್ಮಾರಕ ಟ್ರಸ್ಟ್ ನಲ್ಲಿ ಭೈರಪ್ಪನವರ ಪುಸ್ತಕ, ಫೋಟೊ, ಬಾಲ್ಯದಲ್ಲಿ ಬಳಸುತ್ತಿದ್ದ ಟ್ರಂಕ್, ಕೈ ಬರಹ, ದೇಶದ ಮಹನೀಯರ ಜೊತೆಗಿನ ಭಾವಚಿತ್ರಗಳು ಭೈರಪ್ಪ ಅಭಿಮಾನಿಗಳಲ್ಲಿ ಪುಳಕ ಉಂಟು ಮಾಡಿತು.

ಸಂತೇಶಿವರದಲ್ಲಿ ಸಾಹಿತ್ಯ ರಸದೌತಣ: ಭೈರಪ್ಪನವರ ಹುಟ್ಟೂರು ಸಂತೇಶಿವರದಲ್ಲಿ ಭಾನುವಾರ ಸಾಹಿತ್ಯದ ರಸದೌತಣ ಉಣಬಡಿಸಲಾಯಿತು. ವೇದಿಕೆ ಮುಂಭಾಗ ಅಳವಡಿಸಿದ್ದ ಪುಸ್ತಕ ಭಂಡಾರಕ್ಕೆ ನೂರಾರು ಸಾಹಿತ್ಯ ಪ್ರೇಮಿಗಳು ಲಗ್ಗೆಯಿಟ್ಟು ನೆಚ್ಚಿನ ಸಾಹಿತಿಯ ಪುಸ್ತಕಗಳನ್ನು ಖರೀದಿಸಿದರು.

ಸುತ್ತಮುತ್ತಲ ಗ್ರಾಮಸ್ಥರು ಸರದಿ ಸಾಲಿನಲ್ಲಿ ಆಗಮಿಸಿ ಎಸ್.ಎಲ್.ಭೈರಪ್ಪ ಅವರನ್ನು ಅಭಿನಂದಿಸಿದರು. ರಾತ್ರಿ ಕುರುಕ್ಷೇತ್ರ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

# ಹಾಸನದಲ್ಲಿ ಪೊಲೀಸರ ಮ್ಯಾರಥಾನ್

ಹಾಸನ: ಫಿಟ್‌ನೆಸ್ ಫಾರ್ ಆಲ್, ಡ್ರಗ್ಸ್ ಫ್ರೀ ಕರ್ನಾಟಕ ಶೀರ್ಷಿಕೆಯಡಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಭಾನುವಾರ ನಗರದಲ್ಲಿ ಹಮ್ಮಿಕೊಂಡಿದ್ದ ಪೊಲೀಸರೊಂದಿಗೆ ಓಟ 5 ಕಿ.ಮೀ. ಮ್ಯಾರಾಥಾನ್‌ನಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿ ಯಶ್ವಿಗೊಳಿಸಿದರು.



ನಗರದ ಡೇರಿ ವೃತ್ತದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಆವರಣದಿಂದ ಆರಂಭವಾದ ಓಟ ಸಾಲಗಾಮೆ ರಸ್ತೆಯ ಸುಬೇದಾರ್ ನಾಗೇಶ್ ವೃತ್ತಕ್ಕೆ ಆಗಮಿಸಿ ಅಲ್ಲಿಂದ ಮತ್ತೆ ಡೇರಿ ಸರ್ಕಲ್ ತಲುಪಿತು. ಮ್ಯಾರಾಥಾನ್‌ಗೆ ಯಾವುದೇ ಅಡಚಣೆಯಾಗದಂತೆ ಬೆಳಿಗ್ಗೆ 6 ರಿಂದ 11 ಗಂಟೆವರೆಗೆ ಈ ಮಾರ್ಗದಲ್ಲಿ ವಾಹನ ಸಂಚಾರ ನಿಷೇಧಿಸಿ ಪರ್ಯಾಯ ಮಾರ್ಗ ಕಲ್ಪಿಸಲಾಗಿತ್ತು.

ಓಟದಲ್ಲಿ ಸಾರ್ವಜನಿಕರು, ಶಾಲಾ-ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಜಿಲ್ಲೆಯ ಎಲ್ಲಾ ಸರ್ಕಾರಿ ನೌಕರರು, ಜಿಲ್ಲೆಯ ಸರ್ಕಾರೇತರ ಸಂಘ ಸಂಸ್ಥೆಯವರು, ಜಿಲ್ಲೆಯ ಎಲ್ಲಾ ಉಪ-ವಿಭಾಗಗಳ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಮಾತನಾಡಿ, ಡ್ರಗ್ಸ್ ಫ್ರೀ ಕರ್ನಾಟಕ, ಫಿಟ್‌ನೆಸ್ ಫಾರ್ ಆಲ್, ಸೈಬರ್ ಅಪರಾಧಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ರಾಜ್ಯಾದ್ಯಂತ ನಮ್ಮ ಪೊಲೀಸ್ ನಮ್ಮ ಹೆಮ್ಮೆ ಎಂಬ ಸಂದೇಶದೊಂದಿಗೆ ಮ್ಯಾರಥಾನ್ ಓಟವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 4,093 ಜನರು ನೋಂದಣಿ ಮಾಡಿಕೊಂಡಿದ್ದಾರೆ. 20ಕ್ಕೂ ಹೆಚ್ಚು ಶಾಲೆ-ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ. ಸರ್ಕಾರಿ ಇಂಜಿನೀಯರಿಂಗ್, ವೈದ್ಯಕೀಯ ಕಾಲೇಜು, ಬ್ಯಾಂಕ್, ಎನ್‌ಜಿಓ ಸಂಸ್ಥೆಯವರು ಸಹಕಾರ ನೀಡಿದ್ದಾರೆ ಎಂದು ಹೇಳಿದರು.

ಇಂದಿನ ಓಟದಲ್ಲಿ ಅಂದಾಜು 5 ಸಾವಿರ ಮಂದಿ ಭಾಗವಹಿಸಿರುವುದು ಹೆಮ್ಮೆಯಾಗಿದೆ. ಪ್ರತಿ ವರ್ಷ ಪೊಲೀಸ್ ಜಾಗೃತಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ಈ ವರ್ಷ ಪೊಲೀಸರೊಂದಿಗೆ ಓಟ ಎಂಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅದಕ್ಕೆ ಸಾರ್ವಜನಿಕರು ಸಹಕಾರ ನೀಡಿ ಭಾಗವಹಿಸಿದ್ದಾರೆ. ಸಾಕಷ್ಟು ಚಿಕ್ಕ ಮಕ್ಕಳು ಆಗಮಿಸಿರುವುದು ಸಂತೋಷದ ವಿಷಯ. ಎಲ್ಲರು 5 ಕಿ.ಮೀ. ಓಡಿ ಪೂರ್ಣಗೊಳಿಸಬೇಕೆಂದಿಲ್ಲ ಭಾಗವಹಿಸುವಿಕೆ ಮುಖ್ಯ. ಡ್ರಗ್ಸ್ ಮತ್ತು ಸೈಬರ್ ಕ್ರೈಂ ಬಗ್ಗೆ ಜಾಗೃತಿ ಮೂಡಿಸುವುದು ಹಾಗು ಪೊಲೀಸರು ಜನಸಾಮಾನ್ಯರೊಂದಿಗೆ ಇದ್ದಾರೆ ಎಂಬ ಸಂದೇಶವನ್ನು ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದರು.

# ಗುರು-ಹಿರಿಯರಿಗೆ ಗೌರವಿಸುವುದನ್ನು ಕಲಿಯಿರಿ

ಹಾಸನ: ಗುರು-ಹಿರಿಯರನ್ನು ಗೌರವಿಸುವ ಗುಣಗಳನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು ಎಂದು ಸಮಾಜ ಸೇವಕಿ ಪ್ರೇಮರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು, ಸ್ವಾಯತ್ತ ಕಾಲೇಜಿನ ಮೈತ್ರೇಯಿ ಮಹಿಳಾ ವೇದಿಕೆಯಿಂದ ಕಾಲೇಜು ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ-2025 ಕಾರ್ಯಕ್ರಮದಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ಮಾತನಾಡಿದರು.



ಮೊಬೈಲ್ ಗೀಳು ಇಂದು ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿದೆ. ಆದ್ದರಿಂದ ಅನಾಹುತಗಳೇ ಹೆಚ್ಚಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಒಲವನ್ನು ತೋರಿಸಬೇಕು ಎಂದು ಹೇಳುವುದರ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳಾ ಸಾಧಕಿಯರನ್ನು ಈ ಸಂದರ್ಭದಲ್ಲಿ ನೆನೆದರು. ಶಿಕ್ಷೆ ಇದ್ದಲ್ಲಿ ಶಿಕ್ಷಣ ಉನ್ನತ ಮಟ್ಟಕ್ಕೆ ಏರುತ್ತದೆ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಪೋಷಕರು ಮಕ್ಕಳನ್ನು ಪ್ರೀತಿಯಿಂದ ಬೆಳೆಸುವುದು ಎನ್ನುತ್ತಲೇ ಅವರನ್ನು ಸೋಮಾರಿಗಳನ್ನು ಮಾಡುತ್ತಿದ್ದಾರೆ.

ಮಕ್ಕಳನ್ನು ಸಂಸ್ಕಾರಯುತವಾಗಿ ಬೆಳೆಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಪರೀಕ್ಷಾ ನಿಯಂತ್ರಕ ಡಾ. ಕೆ.ಡಿ. ಮುರಳೀಧರ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಮಹಿಳೆಯರ ಶೋಷಣೆ ಮತ್ತು ಅವಕಾಶಗಳನ್ನು ತಪ್ಪಿಸುವ ಸಂದರ್ಭಗಳನ್ನು ಮನಗಂಡು ಮಹಿಳೆಯರಿಗೂ ಸ್ಥಾನಮಾನ ಸಿಗಬೇಕು ಎಂಬುದು ಈ ಆಚರಣೆಗಳ ಮುಖ್ಯ ಉದ್ದೇಶ. ಭಾರತಕ್ಕೆ ತುರ್ತಾಗಿ ಈ ರೀತಿಯ ದಿನಾಚರಣೆಗಳು ಬೇಕಿತ್ತು. 30 ರಿಂದ 40 ವರ್ಷದ ಹಿಂದೆ ಮಹಿಳೆಗೆ ನಿರ್ಬಂಧಗಳಿದ್ದವು. ಪ್ರಸ್ತುತ ದಿನಗಳು ಇವು ಬದಲಾಗಿದೆ. ಪದವಿ ಹಂತದಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಾದ ಶೈಕ್ಷಣಿಕ ಅವಕಾಶಗಳಿವೆ. ಸರಿಯಾದ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕು. ತಾಯಿ ತನ್ನ ಮಕ್ಕಳ ಬಗ್ಗೆ ಅತಿಯಾದ ಕನಸುಗಳನ್ನು ಕಾಣುತ್ತಾಳೆ. ಅದನ್ನು ಸಕಾರಗೊಳಿಸುವ ನಿಟ್ಟಿನಲ್ಲಿ ಮಕ್ಕಳು ಚಿಂತನೆ ನೆಡೆಸಬೇಕು ಎಂದು ಹೇಳಿದರು.

ಪತ್ರಾಂಕಿತ ವ್ಯವಸ್ಥಾಪಕ ಕೆ.ಟಿ. ಸತ್ಯಮೂರ್ತಿ ಮಾತನಾಡಿ, ಹೆಣ್ಣು ಪುರುಷನ ಸಹಾಯವಿಲ್ಲದೆ ಬದುಕಬಲ್ಲಳು. ಅದು ವಿದ್ಯಾಭ್ಯಾಸ ಪಡೆದರೆ ಮಾತ್ರ ಸಾಧ್ಯ. ಹೆಣ್ಣು ಮಕ್ಕಳು ಹೆಚ್ಚು ಶಿಕ್ಷಿತರಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಎಂ.ಬಿ. ಇರ್ಷಾದ್ ಮಾತನಾಡಿ, ಜೀವನ ತಾಯಿ ಕೊಟ್ಟ ಭಿಕ್ಷೆ. ಪುರುಷನ ಯಶಸ್ಸಿನ ಪ್ರತಿ ಹಂತದಲ್ಲಿಯೂ ಸ್ತ್ರೀ ಇದ್ದಾಳೆ. ಸ್ತ್ರೀ ಎಂದರೆ ಶಕ್ತಿ. ಆ ಶಕ್ತಿ ಮುಂದೆ ಇಡೀ ಬ್ರಹ್ಮಾಂಡವೇ ತಲೆ ತಗ್ಗಿಸುತ್ತದೆ ಎಂದು ಮಹಿಳೆಯರನ್ನು ಕುರಿತು ಗೌರವದ ಮಾತುಗಳನ್ನಾಡಿದರು.

ಕಾರ್ಯಕ್ರಮ ಸಂಚಾಲಕಿ ಡಿ.ಆರ್. ಅನುರಾಧ ಮಾತನಾಡಿ, ಹೆಣ್ಣು ಎಲ್ಲಿ ಸುಭಿಕ್ಷವಾಗಿ ನಡೆಸುತ್ತಾಳೋ ಅಲ್ಲಿ ದೇವತೆಗಳಿರುತ್ತಾರೆ. ಮಹಿಳೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ತನ್ನದೇ ಆದ ಛಾಪು ಮೂಡಿಸಿ ಮುನ್ನುಗ್ಗುತ್ತಿದ್ದಾಳೆ ಎಂದರು.

ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ದೀಪಾ ಸ್ವಾಗತಿಸಿದರು. ಹಿಂದಿ ವಿಭಾಗದ ಉಪನ್ಯಾಸಕಿ ಬಿ.ಆರ್. ಮಾಲತಿ ಮತ್ತಿತರರಿದ್ದರು.

# ಹಾಸ್ಟೆಲ್ ಹೆಚ್ಚುವರಿ ಕೊಠಡಿಗೆ ಭೂಮಿಪೂಜೆ



ಅರಕಲಗೂಡು: ಪಟ್ಟಣದ ಸಮಾಜ ಕಲ್ಯಾಣ ಇಲಾಖೆ ಸರ್ಕಾರಿ ಬಾಲಕರ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯದ ಹೆಚ್ಚುವರಿ ಕೊಠಡಿ ಕಾಮಗಾರಿಗೆ ಶಾಸಕ ಎ. ಮಂಜು ಭೂಮಿಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿ, ಈ ವಿದ್ಯಾರ್ಥಿ ನಿಲಯವು ಕೊಠಡಿ ಸಮಸ್ಯೆಯನ್ನು ಎದುರಿಸುತ್ತಿತ್ತು. ಒಂದು ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಳ್ಳುವ ಹೆಚ್ಚುವರಿ ಕೊಠಡಿಯಿಂದ ಸಮಸ್ಯೆ ನಿವಾರಣೆಯಾಗಲಿದೆ. ನಿಗದಿತ ಅವಧಿ ಒಳಗೆ ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಮುಂದಾಗಬೇಕೆಂದು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಪಟ್ಟಣದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹಳೆಯ ಕಟ್ಟಡದಿಂದ ಕೂಡಿದ್ದು, ನೂರಕ್ಕೂ ಹೆಚ್ಚು ಮಕ್ಕಳು ದಾಖಲಾಗಿದ್ದಾರೆ. ಕೊಠಡಿ ಸಮಸ್ಯೆ ಇತ್ತು. ಸರ್ಕಾರಿ ಮಟ್ಟದಲ್ಲಿ ಒಂದು ಕೋಟಿ ರೂ. ಅನುದಾನ ತಂದು ಕೊಠಡಿ ಸಮಸ್ಯೆ ನಿವಾರಣೆ ಮಾಡಲಾಗುತ್ತಿದೆ. ಈ ನೂತನ ಹೆಚ್ಚುವರಿ ಕೊಠಡಿ ಕಾಮಗಾರಿ ಪೂರ್ಣಗೊಂಡರೆ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರವಾಗಲಿದೆ. ಕಾಮಗಾರಿಯನ್ನು ಅತ್ಯಂತ ಗುಣಮಟ್ಟದಿಂದ ನಿರ್ವಹಿಸಬೇಕಿದ್ದು ಯಾವುದೇ ಲೋಪ ಆಗದಂತೆ ಎಚ್ಚರಿಕೆ ವಹಿಸಬೇಕೆಂದು ಗುತ್ತಿಗೆದಾರರಿಗೆ ಸೂಚನೆ ನೀಡಿದರಲ್ಲದೇ ಇಲಾಖೆ ಅಧಿಕಾರಿಗಳು, ಈ ನಿಲಯದ ವಾರ್ಡನ್ ಕೂಡ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು.

ಕಾಮಗಾರಿಯನ್ನು ಆರು ತಿಂಗಳ ಒಳಗೆ ಪೂರ್ಣಗೊಳಿಸಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ನೆರವಾಗುವುದಾಗಿ ಗುತ್ತಿಗೆದಾರ ಶಾಸಕರು ಸಮ್ಮುಖದಲ್ಲಿ ಭರವಸೆ ನೀಡಿದರು.

ವಿದ್ಯಾರ್ಥಿ ನಿಲಯದ ಅಧಿಕಾರಿ ಕಾವೇರಿ, ಮುಖಂಡರಾದ ವಿಜಯ್‌ಕುಮಾರ್, ಜಬೀವುಲ್ಲಾ, ಎಂಜಿನಿಯರ್ ಶಿವಕುಮಾರ್ ಇತರರು ಹಾಜರಿದ್ದರು.

# ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ: ಮಹೇಶ್



ಹಾಸನ: ಹೆಣ್ಣು ಮಕ್ಕಳು ಪದವಿ ಪಡೆದುಕೊಂಡರೆ ಸಾಲದು. ವೃತ್ತಿ ಜೀವನ ಹೆಣ್ಣು ಮಕ್ಕಳಿಗೆ ಮುಖ್ಯವಾಗಬೇಕು. ಹಾಗಾದರೆ ಮಾತ್ರ ಲಿಂಗ ಸಮಾನತೆ, ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ರಾಜೀವ್ ಎಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಮಹೇಶ್ ತಿಳಿಸಿದರು.

ನಗರದ ರಾಜೀವ್ ತಾಂತ್ರಿಕ ಮಹಾ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೃತ್ತಿಯಲ್ಲಿ ಅಭಿವೃದ್ಧಿ ಹೊಂದುವ ಆರ್ಥಿಕ ಸ್ವಾವಲಂಬಿತನ ಗಂಡು ಮಕ್ಕಳಿಗೆ ಎಷ್ಟು ಮುಖ್ಯವೋ ಹೆಣ್ಣು ಮಕ್ಕಳಿಗೂ ಸಹ ಅಷ್ಟೇ ಮುಖ್ಯ. ಜೀವನದ ಕೆಲವು ನಿರ್ಣಾಯಕ ಸಮಯಗಳಲ್ಲಿ ಹೆಣ್ಣು ಮಕ್ಕಳು ಸರಿಯಾದ ನಿರ್ಧಾರಗಳನ್ನು ತೆಗೆದುಕೊಂಡು ವೃತ್ತಿಯಲ್ಲಿ ಮುಂದುವರೆದು ಕೌಟುಂಬಿಕ, ವೃತ್ತಿ ನಿರತ ಹಾಗು ಸಾಮಾಜಿಕ ಜವಾಬ್ದಾರಿಗಳನ್ನು ಮುಂದುವರೆಸಿಕೊಂಡು ಹೋಗಬಹುದು ಎಂದು ಹೇಳಿದರು.

ವಕೀಲೆ ಗಿರಿಜಾಂಬಿಕಾ ಅವರು ಮಾತನಾಡಿ, ಸ್ವಾವಲಂಬಿ ಬದುಕು ರೂಪಿಸಿಕೊಂಡ ಹೆಣ್ಣು ಮಕ್ಕಳು ನಮ್ಮ ಭಾರತೀಯ ಸಂಸ್ಕೃತಿಯನ್ನು ಮರೆಯಬಾರದು. ಕೌಟುಂಬಿಕ ಜೀವನ, ಸಹ ಬಾಳ್ವೆ ನಮ್ಮ ಸಮಾಜವನ್ನು ಕಟ್ಟುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ತಿಳಿಸಿದ ಅವರು, ಕಾನೂನಿನ ಅಡಿಯಲ್ಲಿ ಹೆಣ್ಣು ಮಕ್ಕಳಿಗೆ ಇರುವ ಸುರಕ್ಷತೆ ಹಾಗು ಅದರ ಅರಿವು ಬಗ್ಗೆ ವಿವರಿಸಿದರು.

ಪ್ರಸೂತಿ ತಜ್ಞೆ ಬಿ.ಎನ್.ಶ್ರೀವಿದ್ಯಾ ಅವರು, ಗರ್ಭಕಂಠ ಕೊರಳ ಕ್ಯಾನ್ಸರ್‌ಗೆ ಕಾರಣಗಳು ಹಾಗು ತಡೆಗಟ್ಟುವಿಕೆ ಕುರಿತು ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸಿದರು. ಶುಚಿತ್ವ, ಶುದ್ಧ ಆಹಾರ ಪದ್ಧತಿ, ಉತ್ತಮ ಜೀವನ ಪದ್ಧತಿ, ದೇಹವನ್ನಷ್ಟೇ ಅಲ್ಲ ಮಾನಸಿಕ ಆರೋಗ್ಯವನ್ನು ಸದೃಢವಾಗಿ ಇಟ್ಟುಕೊಳ್ಳುವ ಬಗ್ಗೆ ಸರಳವಾಗಿ ಮನವರಿಕೆ ಮಾಡಿಕೊಟ್ಟರು.

ಮಹಿಳಾ ದಿನಾಚರಣೆ ಅಂಗವಾಗಿ ನಡೆದಂತಹ ಸಾಂಸ್ಕೃತಿಕ ಮತ್ತು ಪಠ್ಯೇತರ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು.

ಕಾಲೇಜಿನ ಆಂತರಿಕ ದೂರು ಸಮಿತಿ ಅಧ್ಯಕ್ಷೆ ಬಿ.ಎಸ್.ಭವಾನಿ, ಮೆಕ್ಯಾನಿಕಲ್ ಇಂಜಿನೀಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕಿ ರಾಣಿ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥೆ ವೀಣಾ ಮತ್ತಿತರರು ಹಾಜರಿದ್ದರು.

# ನಿವೇದಿತಾ ಶಾಲೆಯಲ್ಲಿ ಆರೋಗ್ಯ ಜಾಗೃತಿ

ಅರಕಲಗೂಡು: ಪಟ್ಟಣದ ನಿವೇದಿತಾ ಶಾಲೆಯಲ್ಲಿ ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಎಂಬ ಶೀರ್ಷಿಕೆಯಡಿ ಆರೋಗ್ಯ ಜಾಗೃತಿ ಕಾರ್ಯಕ್ರಮ ನಡೆಯಿತು.

ಅರಕಲಗೂಡು ಸಾರ್ವಜನಿಕ ಆಸ್ಪತ್ರೆ ಆಪ್ತ ಸಮಾಲೋಚಕ ಪರುಶರಾಮ್ ಶಿರೂರ ಮಾತನಾಡಿ, ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆಯನ್ನು ಕಾಣುತ್ತಿದ್ದೇವೆ. ಅದಕ್ಕೆ ಕಾರಣ ನಮ್ಮ ಆಹಾರ ಪದ್ಧತಿ. ಇಂದು ನಮ್ಮ ಮಕ್ಕಳು ದೇಶೀಯ ಆಹಾರ ಪದ್ಧತಿಯನ್ನು ಮರೆತು, ಜಂಕ್ ಫುಡ್‌ಗಳತ್ತ ಮಾರು ಹೋಗಿದ್ದಾರೆ. ಅಂತಹ ಆಹಾರಗಳು ನಾಲಿಗೆಗೆ ರುಚಿ ಕೊಡಬಹುದು. ದೇಹದ ಪೌಷ್ಟಿಕಾಂಶ ಹೆಚ್ಚಿಸುವುದಿಲ್ಲ. ಈ ಬಗ್ಗೆ ಪೋಷಕರು ಜಾಗೃತರಾಗಿ ಜಂಕ್ ಫುಡ್‌ಗಳಿಂದ ಮಕ್ಕಳನ್ನು ದೂರವಿರಿಸಬೇಕು ಎಂದರು.



ಮಕ್ಕಳೆಂದ ಕೂಡಲೇ ಅತಿಯಾದ ಪ್ರೀತಿಯಿಂದ ನೋಡುವ ಸಲುವಾಗಿ ಅವರ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮದ ಬಗ್ಗೆ ನಾವು ಜಾಗೃತಿ ವಹಿಸುತ್ತಿಲ್ಲ ಎಂದರು. ಇದರ ಪರಿಣಾಮ ಅಪಾಯಕಾರಿಯಾಗಿದೆ ಎಂದು ಎಚ್ಚರಿಸಿದರು.

ಸಂಸ್ಥೆಯ ಕಾರ್ಯದರ್ಶಿ ಎ.ಆರ್. ಸುಬ್ಬರಾವ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಶಿಕ್ಷಕಿ ಬಿ.ಎಂ.ರಾಗಿಣಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಕ್ಕಳಿಂದ ವಿವಿಧ ಹಣ್ಣುಗಳ ಪ್ರಾತ್ಯಕ್ಷಿಕೆ ನಡೆಯಿತು. ಸುಮಾರು 150ಕ್ಕೂ ಹೆಚ್ಚು ಮಕ್ಕಳು ವಿವಿಧ ಬಗೆಯ ತರಕಾರಿ, ಕಾಳು, ಹಣ್ಣುಗಳಿಂದ ತಯಾರಿಸಿದ ದೇಶೀಯ ಆಹಾರಗಳನ್ನು ತಯಾರಿಸಿ, ಅವುಗಳಿಂದ ದೊರೆಯುವ ಪೌಷ್ಟಿಕತೆಯ ಬಗೆಗೆ ಪರಿಚಯಿಸಿದರು. ಕಾರ್ಯಕ್ರಮದಲ್ಲಿ ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ಮಹಿಳೆ ಹೊಟ್ಟೆಯಿಂದ ಗೆಡ್ಡೆ ಹೊರತೆಗೆದ ವೈದ್ಯರು

ಸಕಲೇಶಪುರ: ಮಹಿಳೆಯ ಹೊಟ್ಟೆಯಲ್ಲಿದ್ದ ಏಳು ಕೆ.ಜಿ. ಗೆಡ್ಡೆಯನ್ನು ಕ್ರಾಫರ್ಡ್ ಆಸ್ಪತ್ರೆ ವೈದ್ಯ ಡಾ. ಪುರುಷೋತ್ತಮ್ ಶಸ್ತ್ರಚಿಕಿತ್ಸೆ ಮೂಲಕ ಹೊರ ತೆಗೆದಿದ್ದಾರೆ.

ಒಂದು ವಾರದ ಹಿಂದೆ ಹೊಟ್ಟೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ತಾಲ್ಲೂಕಿನ ಚಿಕ್ಕಲ್ಲೂರು ಗ್ರಾಮದ ಮಹಿಳೆಯನ್ನು ಪರೀಕ್ಷಿಸಿದ ವೈದ್ಯರು ಮಹಿಳೆಯ ಹೊಟ್ಟೆಯಲ್ಲಿ ಬೃಹತ್ ಗೆಡ್ಡೆ ಇರುವುದನ್ನು ಪತ್ತೆ ಹಚ್ಚಿ ಕಳೆದ ಎರಡು ದಿನಗಳ ಹಿಂದೆ ಶಸ್ತ್ರಚಿಕಿತ್ಸೆ ಮೂಲಕ ಗೆಡ್ಡೆಯನ್ನು ಹೊರತೆಗೆದಿದ್ದಾರೆ. ಕಳೆದ ಒಂದು ವರ್ಷದ ಹಿಂದೆ ಇದೆ ವೈದ್ಯರು ಮತ್ತೊಬ್ಬ ಮಹಿಳೆಯ ಹೊಟ್ಟೆಯಲ್ಲಿದ್ದ 10 ಕೆ.ಜಿ. ಗೆಡ್ಡೆಯನ್ನು ಹೊರ ತೆಗೆದಿದ್ದರು.

ಅನಸ್ತೇಷಿಯ ಇಲ್ಲ: 120 ಹಾಸಿಗೆ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಯಲ್ಲಿ ಅನಸ್ತೇಷಿಯ ವೈದ್ಯರು ಇದ್ದ ವೇಳೆ ನಿತ್ಯ 10 ಕ್ಕೂ ಅಧಿಕ ಶಸ್ತಚಿಕಿತ್ಸೆಗಳು ನಡೆಯುತ್ತಿದ್ದವು. ಆದರೆ ಎರವಲು ಸೇವೆಯಲ್ಲಿ ಇಲ್ಲಿ ಕೆಲಸ ಮಾಡುತ್ತಿದ್ದ ಅನಸ್ತೇಷಿಯ ವೈದ್ಯರು ಇಲ್ಲಿಂದ ವರ್ಗಾವಣೆ ಪಡೆದ ನಂತರ ಕಳೆದ ಆರು ತಿಂಗಳಿನಿದ ಅನಸ್ತೇಷಿಯ ವೈದ್ಯರು ಇಲ್ಲದಾಗಿದ್ದರೆ.

ವೈದ್ಯರ ಮನವಿಯ ಮೇರೆಗೆ ಆಲೂರಿನಿಂದ ವಾರಕ್ಕೆ ಎರಡು ಬಾರಿ ಅನಸ್ತೇಷಿಯ ವೈದ್ಯರು ಆಗಮಿಸುತ್ತಿದ್ದು ಈ ವೈದ್ಯರು ಆಗಮಿಸಿದಾಗ ಮಾತ್ರ ಶಸ್ತಚಿಕಿತ್ಸೆಗಳು ನಡೆಯುತ್ತಿವೆ.

ಉತ್ತಮ ವೈದ್ಯರ ತಂಡ: ವೈದ್ಯರ ಕೊರತೆಯಿಂದ ಬಸವಳಿದಿದ್ದ ತಾಲೂಕು ಆಸ್ಪತ್ರೆಯಲ್ಲಿ ಸದ್ಯ ಉತ್ತಮ ವೈದ್ಯರ ತಂಡವಿದ್ದು ಮೂಳೆ, ದಂತ, ಮಹಿಳಾ ವೈದ್ಯರನ್ನು ಕಾಣಲು ಹೊರ ತಾಲ್ಲೂಕುಗಳಿಂದ ರೋಗಿಗಳು ಆಗಮಿಸುತ್ತಿರುವುದು ಪುಷ್ಠಿ ನೀಡುತ್ತಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248